ಶ್ರೀ ಪಿ. ಎಂ. ಬಂಗಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ 10 ಯೋಜನೆಗಳನ್ನು ಮಂಜೂರು ಮಾಡಿದ್ದೇನೆ ಎಂದು ಹೇಳಿದ್ದೀರಿ, ಆ 10 ಯೋಜನೆಗಳು ಯಾವುವು ಎಂಬುದನ್ನು ಹೆಸರು ಹೇಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಯೋಜನೆಗಳು ಕಾರ್ಕಳ, ಹುಲ್ಲಹಳ್ಳಿ, ಸಿರಗುಪ್ಪಿ, ಬಿದರಿ, ಹಿಪ್ಪಾರ್ ಮತ್ತು ಜಮಖಂಡಿ ತಾಲ್ಲೂಕಿನಲ್ಲಿ ಉಳ್ಳಾಳ್, ಬಡದಿಣ್ಣಿ, ಗುಂಡನಪಲ್ಲಿ ಮತ್ತು ಜಾಲಟ್ಟಿ.

ಶ್ರೀ ಪಿ. ಎಂ. ಬಂಗಿ.—ಎರಡು ಯೋಜನೆಗಳು ಮಂಜೂರಾಗಿಲ್ಲ ಎಂದು ಹೇಳಿದ್ದೀರಿ ಆ ಎರಡು ಯೋಜನೆಗಳು ಯಾವುವು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಇನ್‌ವೆಸ್ಟಿಗೇಷನ್‌ನಲ್ಲಿರತಕ್ಕ ಯೋಜನೆಗಳು ಕೌಳಿ ಮತ್ತು ಹೆಗ್ಗೂರು.

Irrigation tank near Siddegowdana Doddi, Athgur Hobli, Maddur Taluk.

717. **Sri A. D. BILIGOWDA** (Maddur).—

Will the Minister for Public Works and Electricity be pleased to state :—

the stage at which the proposal of constructing an irrigational tank near Siddegowdana Doddi in Athgur Hobli in Maddur Taluk and the reason for the delay in implementing it ?

Sri H. M. CHANNABASAPPA (Minister for Public Works and Electricity).—

The proposal is under investigation.

ಶ್ರೀ ಎ. ಡಿ. ಬಿಳಿಗೌಡ.—ಸ್ವಾಮಿ, ಮದ್ದೂರು ತಾಲ್ಲೂಕಿನ ಅತ್ತೂರು ಹೋಬಳಿಯ ಸಿದ್ದೇಗೌಡನ ದೊಡ್ಡಿಯ ಬಳಿ ನೀರಾನರಿ ಕೆರೆಯನ್ನು ನಿರ್ಮಿಸುವುದು ತನಿಖೆಯಲ್ಲಿದೆ ಎಂದು ತಾವು ಹೇಳಿದ್ದೀರಿ, ಅಭಾವ ಪರಿಸ್ಥಿತಿಗೆ ಒಳಗಾಗುವ ಸಿಡಸಾಲೆ ಮತ್ತು ಶಿವನಹಳ್ಳಿ ಕರೆಗೆ ಸೀಪೇಜ್ ವಾಟರ್ ಬರುವ ಸಂದರ್ಭ ಇದೆ. ಆದ್ದರಿಂದ ಸಿದ್ದೇಗೌಡರ ದೊಡ್ಡಿಯ ಬಳಿ ಕೆರೆಯನ್ನು ಆದಷ್ಟು ಬೇಗ ಕಟ್ಟಿಸಿ ಕೊಡುವ ಏರ್ಪಾಟು ಮಾಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ವಿಚಾರಣೆಯಲ್ಲಿದೆ, ಅದು ವಿಚಾರಣೆ ಆದಮೇಲೆ ನೋಡೋಣ.

Lift Irrigation facilities from River Shimsha to Athgur and Alur Villages

718. **Sri A. D. BILIGOWA** (Maddur).—

Will the Minister for Public Works and Electricity be pleased to state :—

whether there is any proposal to provide Lift Irrigation facilities from Shimsha river to Athgur and Alur villages in Maddur Taluk ?

Sri H. M. CHANNABASAPPA (Minister for Public Works and Electricity).—

(1) Lift Irrigation Scheme at Athgur.

There is no proposal.

(2) Lift Irrigation Scheme at Alur :

The proposal is under investigation.

ಶ್ರೀ ಎ. ಡಿ. ಬಿಳಿಗೌಡ.—ಸಾಮಿ, ಅತ್ಕೂರಿನ ಯಾತ ನೀರಾವರಿ ಯೋಜನೆಯ ಬಗ್ಗೆ ಸಲಹೆ ಏನೂ ಇಲ್ಲ ಎಂದು ಹೇಳಿದ್ದೀರಿ, ಬಹಳ ವರ್ಷಗಳಿಂದ ಈ ಪ್ರದೇಶದ ಜನಗಳು ಒಂದೇ ಸಮನಾಗಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ಮಾಡಿಸಿ ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಮನವಿ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಒಂದು ಕಾರಣದಿಂದಲೇ ಅದನ್ನು ಮಾಡಿಸಿಕೊಡುವುದಕ್ಕಾಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ಅದನ್ನು ಲೆಫ್ಟ್ ಬ್ಯಾಂಕ್ ಚಾನಲ್‌ನಿಂದ ಮಾಡುವುದಕ್ಕೆ ಸಾಧ್ಯ ಇದೆ ಎಂದು ಇಂಜಿನಿಯರು ಅಭಿಪ್ರಾಯ ಪಡುತ್ತಾರೆ. ಅದು ಬೆಂಗಾಡು ಪ್ರದೇಶ. ಆದ್ದರಿಂದ ಅತ್ಕೂರು ಲಫ್ಟ್ ಇರಿಗೇಷನ್ ಯೋಜನೆಯನ್ನು ಕಾರ್ಯಗತ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಳೆಯಿಂದ ನೀರನ್ನು ಎತ್ತಿ ಬಿಡಬಹುದು. ಕಾಲುವೆಯಿಂದ ನೀರನ್ನು ಎತ್ತಿ ಬಿಡುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ನಾಲೆಯಲ್ಲಿ ಪೇಸ್ಟ್ ಆಗತಕ್ಕಂಥಾ ನೀರನ್ನು ಲಿಫ್ಟ್ ಮಾಡಿ ಅತ್ಕೂರು ಕೆರೆಗೆ ನೀರನ್ನು ಸಪ್ಲೈ ಮಾಡಿದರೆ ಸಾವಿರಾರು ಎಕರೆ ನೀರಿನ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅತ್ಕೂರು ಕೆರೆ ಆ ಕಾಲುವೆಗಿಂತ 75 ಅಡಿ ಎತ್ತರದಲ್ಲಿದೆ. ಅದು ಎಕನಾಮಿಕ್ ಪ್ರಾಪೋಜಿಷನ್ ಅಲ್ಲ ಎಂದು ಸ್ಪಷ್ಟ ಮಾಡಿದ್ದಾರೆ.

Minor Irrigation and Lift Irrigation Schemes in Gulbarga District

211. Sri BAPUGOWDA (Shahapur).—

Will the Minister for Public Works and Eleciricity be pleased to state :—

(*a*) the number of Minor Irrigation and Lift Irrigation schemes for which survey has been completed and plans and estimates prepared in Gulbarga district ;

(*b*) the number of such works taken up for execution (Talukwise information be furnished) ?

Sri H. M. CHANNABASAPPA (Minister for Public Works and Elictricity).—

(*a*) Surveys have been completed in respect of 74 Minor Irrigation works and 40 Lift Irrigation Schemes. Plans and estimates have been prepared for all the works.

(*b*) Furnished in Statement appended.